SS – 041

# ಮೂರನೆಯ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2018
## (ಫ್ರೆಷರ್ಸ್ + ರಿಪೀಟರ್ಸ್) (ಸಿ.ಬಿ.ಸಿ.ಎಸ್.) ( 2015–16 ಮತ್ತು ನಂತರದವರಿಗೆ)
## ಕನ್ನಡ ಭಾಷಾ ಪತ್ರಿಕೆ – III
## ಸುವರ್ಣ ಸಂಪದ

ಸಮಯ : 3 ಗಂಟೆಗಳು    ಗರಿಷ್ಠಾಂಕಗಳು : 70

I. ಅ) ಪದ್ಯದ ಭಾವಾರ್ಥ ಬರೆಯಿರಿ. **(1×6=6)**

ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು;
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ;
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ
–ಶೃಂಗಾರ;
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ
–ಸುಜಲವ ತುಂಬಿದಂತೆ;
ಮಾರಯ್ಯಪ್ರಿಯ ಅಮರೇಶ್ವರಲಿಂಗವ ಮುಟ್ಟದ
–ಭಕ್ತಿ

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : **(2×2=4)**

1) ವಚನ

2) ಪಾಲ್ಕುರಿಕೆ ಸೋಮನಾಥ

3) ಆಯ್ದಕ್ಕಿ ಲಕ್ಕಮ್ಮ

4) ಸಂಚಿ ಹೊನ್ನಮ್ಮ

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1×10=10)**

1) ಅಲ್ಲಮ ಪ್ರಭುವಿನ ವಚನಗಳಲ್ಲಿ ವ್ಯಕ್ತವಾಗಿರುವ ಭಕ್ತಿಯ ಸ್ವರೂಪವನ್ನು ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

2) "ಪೆರ್ಮೆಯ ಬಿಟ್ಟು ನಿರ್ಮಲಮತಿಯಾಗು.." ಎಂದು ಸಾಧ್ವಿ ಹೇಳಿದ ಹಿನ್ನೆಲೆಯನ್ನು ವಿವರಿಸಿ.

P.T.O.

II. ಅ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : (2×5=10)

1) ಸಿ.ಎಸ್.ಆರ್.

2) ಕಾರ್ಯಕ್ರಮದ ವರದಿ.

3) ವರ್ಗೀಕೃತ ಜಾಹೀರಾತು.

4) ಕಂಪನಿ ಮಸೂದೆಯ ಆಶಯ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಸಮಿತಿ ವರದಿ ಎಂದರೇನು ? ವರದಿಯ ಮಾದರಿಯೊಂದನ್ನು ಸಿದ್ಧಪಡಿಸಿ.

2) ನಿಮ್ಮ ಕಾಲೇಜಿನ ಸಾಂಸ್ಕೃತಿಕ ಸಂಘದ ವಾರ್ಷಿಕ ವರದಿಯನ್ನು ತಯಾರಿಸಿ.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಗೋಪಣ್ಣ ಮಾಸ್ತರರು ಅಪಾರ್ಟ್‌ಮೆಂಟ್ ಮಕ್ಕಳಿಗೆ ಪಾಠ ಮಾಡಿದ ಪ್ರಸಂಗ.

2) ಲೇಖಕರಿಗೆ ನಾಯಿಯ ಮೇಲಿನ ಕೋಪ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) 'ಯುಗಾದಿ' ಕಥೆಯಲ್ಲಿ ಗೋಪಣ್ಣ ಮಾಸ್ತರರು ಆಧುನಿಕತೆಗೆ ಹೊಂದಿಕೊಂಡ ಸಂದರ್ಭವನ್ನು ವಿವರಿಸಿ.

2) ಶುಭಾಂಟಿಯ ಸ್ವಭಾವವನ್ನು ವಿವರಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಕುವೆಂಪು ಮಾನಪ್ಪನನ್ನು ಮದುವೆಗೆ ಒಪ್ಪಿಸಿದ ಪ್ರಸಂಗ.

2) ಚೀನಾದ ಹಳ್ಳಿಗಳ ಸ್ಥಿತಿ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಕುವೆಂಪು ಮದುವೆ ಸಂದರ್ಭದಲ್ಲಿ ನಡೆದ ಸ್ವಾರಸ್ಯವನ್ನು ಕುರಿತು ಬರೆಯಿರಿ.

2) ಲೇಖಕರು ಸಿಗರೇಟು ಸೇದಲು ಪ್ರಾರಂಭಿಸಿದ ಸಂದರ್ಭ ಮತ್ತು ಅದನ್ನು ಬಿಟ್ಟ ಸಂದರ್ಭವನ್ನು ವಿವರಿಸಿ.